ದಿನಾಂಕ 09-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಅನುಮತಿಯ ಮೇರೆಗೆ ಪಾಟೀಸವಾಲು: ಆರೋಪಿ ಪರ ವಕೀಲರಿಂದ:-**

ಚಾಸಾ-1 ನನ್ನ ಸಹೋದರಿ. ಆರೋಪಿತರು ಚಾಸಾ-1 ರವರಿಗೆ ಮಾನಸಿಕ, ದೈಹಿಕ ಕಿರುಕುಳ ಕೊಟ್ಟಿಲ್ಲ ಎಂದರೆ ಸರಿ. ಚಾಸಾ-1 & 1 ನೇ ಆರೋಪಿಯ ನಡುವೆ ಇದ್ದ ವೈಯಕ್ತಿಕ ವೈಮನಸ್ಸಿನಿಂದ ಈ ರೀತಿ ಸುಳ್ಳು ದೂರು ಕೊಟ್ಟಿದ್ದರು ಎಂದರೆ ಸರಿ. ಆರೋಪಿತರು ಚಾಸಾ-1 ರವರಿಗೆ ಎಂದಿಗೂ ಹೆಚ್ಚಿನ ವರದಕ್ಷಿಣೆ ತರುವಂತೆ ಕೇಳಿಲ್ಲ & ಪಡೆದುಕೊಂಡಿಲ್ಲ ಎಂದರೆ ಸರಿ. ಆರೋಪಿತರು ಚಾಸಾ-1 ರವರಿಗೆ ಜೀವದ ಬೆದರಿಕೆ ಹಾಕಿಲ್ಲ ಎಂದರೆ ಸರಿ. ಆರೋಪಿತರು ಚಾಸಾ-1 ರವರಿಗೆ & ನಿಮ್ಮ ತಾಯಿಯ ಮಾನಕ್ಕೆ ಕುಂದುಂಟು ಮಾಡಿಲ್ಲ ಎಂದರೆ ಸರಿ.

ನೀವು ಪೋಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿ. ಚಾಸಾ-1 ರವರಿಗೆ ಅಡುಗೆ ಮಾಡಲು ಬರುವುದಿಲ್ಲ, ನಿನಗೆ ಮಕ್ಕಳಾಗುವುದಿಲ್ಲ, ನಿನ್ನ ಹಸ್ತರೇಖೆ ಸರಿ ಇಲ್ಲ ಎಂದು ಆರೋಪಿತರು ಕಿರುಕುಳ ಕೊಟ್ಟಿಲ್ಲ ಎಂದರೆ ಸರಿ.

ಅವರಿಬ್ಬರು ರಾಜಿ ಮಾಡಿಕೊಂಡು, ವಿಚ್ಛೇದನೆ ಪಡೆದು, ಬೇರೆ ಬೇರೆಯಾಗಿ ಜೀವನ ಮಾಡುತ್ತಿದ್ದಾರೆ ಎಂದರೆ ಸರಿ.

**ಮರು ವಿಚಾರಣೆ: ಸ.ಸ.ಅ ರವರಿಂದ:-**

ನೀವು ಈ ಮೊದಲು ಹೇಳಿರುವುದು ಸರಿ, ಈಗ ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಈ ದಿನ ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿಂಧನೂರು.**